# ಹರಟೆ ಅರ್ಧದ ನಂತರ ಬದಲಾಗಲಿ!

ಶನಿವಾರ ರಾತ್ರಿಯ ಉದಯ ವಾಹಿನಿಯ 'ಹರಟೆ' ವಿಚಾರ ಪ್ರಚೋದಕವಾಗಿಯೂ, ಮನೋರಂಜನಾತ್ಮಕವಾಗಿಯೂ ಇದೆ. ಈ ಕಾರ್ಯಕ್ರಮವನ್ನು 'ಕಣ್ಣನ್ ಮಾಮ' ತಮ್ಮ ಪ್ರಾಸಬದ್ಧ ಹಾಗೂ ಕಾವ್ಯಾತ್ಮಕವಾದ ಸರಸ ಶೈಲಿಯಿಂದ ಸಮರ್ಥವಾಗಿ ನಡೆಸಿಕೊಡುತ್ತಿರುವುದು ಒಂದು ವಿಶೇಷ ಆಕರ್ಷಣೆ.

ಉಳಿದ ಆರು ಮಂದಿ ಸದಸ್ಯರು ಸಹ ತಮ್ಮ ಪಾಂಡಿತ್ಯ ಹಾಗೂ ವಾಕ್ಚಾತುರ್ಯವನ್ನು ಪ್ರದರ್ಶಿಸಿ ವೀಕ್ಷಕ ಬಂಧುಗಳನ್ನು ಬೆರಗುಗೊಳಿಸಿ, ಮನರಂಜಿಸುತ್ತಾರೆ. ಇನ್ನೊಂದು ವಿಶೇಷವೆಂದರೆ ಎರಡೂ ಬಣದವರು ತಮಗೆ ಕೊಟ್ಟ ವಿಷಯವನ್ನು ಸಮರ್ಥಿಸಿ ಮಾತನಾಡಿದಾಗ ವೀಕ್ಷಕ ಬಂಧುಗಳಿಂದ ಸಮನಾಗಿ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಾರೆ! ಆದರೆ, ಅವರವರ ವಿಷಯದ ಬಗ್ಗೆ ಮಾತನಾಡಿದ ಸದಸ್ಯರೆಲ್ಲರೂ ನಿಜವಾಗಿಯೂ ಆ ವಿಷಯಕ್ಕೆ 'ಬದ್ಧ'ರಾಗಿರುವರೇ ಎಂಬುದೇ ನನ್ನ ಸಂದೇಹ.

ಇದನ್ನು ಗಮನಿಸಿದ ನನ್ನ ಕೀಟಲೆ ಬುದ್ಧಿಗೆ ಒಂದು ಹೊಸ ವಿಚಾರ ಹೊಳೆಯುತ್ತದೆ. ಸಮಯಾರ್ಧದ ನಂತರ ಎರಡೂ ಬಳಗದವರು ತಮಗೆ ಕೊಟ್ಟ ವಿಷಯವನ್ನು ಅದಲು–ಬದಲು ಮಾಡಿ ಮಾತನಾಡಿದರೆ ಇನ್ನೂ ಹೆಚ್ಚಿನ ವಿಚಾರ ಹಾಗೂ ಮನರಂಜನಾತ್ಮಕ ವಿಷಯವು ಆ ಸದಸ್ಯರ ಅಂತರಾಳದಿಂದ ಹೊರಹೊಮ್ಮಿ ವೀಕ್ಷಕರನ್ನು ಇನ್ನಷ್ಟು ಮನರಂಜಿಸುವಲ್ಲಿ ಹಾಗೂ ಅದರಿಂದ ಚಪ್ಪಾಳೆ ಗಿಟ್ಟಿಸುವಲ್ಲಿ ಯಶಸ್ವಿಯಾಗುವ ಬಗ್ಗೆ ಅನುಮಾನವಿಲ್ಲ! ಅಲ್ಲವೇ?

–ಕೆ. ಭಾಸ್ಕರ ಮಕ್ಕಿತ್ತಾಯ, ಮಧುಗಿರಿ

# ಸಿನಿಮಾ ನೋಡಿದರೆ ದೊಡ್ಡ ಸುದ್ದಿಯೇ?

ಕರ್ನಾಟಕದ ಸಚಿವರೊಬ್ಬರು ಗದಗದ ಸಿನಿಮಾ ಮಂದಿರದಲ್ಲಿ 'ಪೃಥ್ವಿ' ಚಲನಚಿತ್ರ ವೀಕ್ಷಿಸಿದ್ದನ್ನು ಸುವರ್ಣ ನ್ಯೂಸ್‌ನ ರಾತ್ರಿ 9 ಗಂಟೆಯ ವಾರ್ತೆಗಳ ಸಮಯದಲ್ಲಿ Breaking News ಎಂದು ತೋರಿಸುತ್ತಿದ್ದರೆ, ಅದೇ ರಾತ್ರಿ ಸುಮಾರು 9.45ಕ್ಕೆ ಕನ್ನಡದ ಟಿ.ವಿ.9 ಚಾನೆಲ್‌ನಲ್ಲಿ News Flash ಎಂದು ತೋರಿಸುತ್ತಿದ್ದರು.

ನಿಜಕ್ಕೂ ಈ ವಿಷಯ ಅಷ್ಟು ಮಹತ್ವ ವಾದುದೇ? ಇದರ ಬಗ್ಗೆ ಚಾನೆಲ್‌ಗಳ ವರು ಯೋಚಿಸಬೇಕು. ತುಂಬಾ ಮಹತ್ವದ ವಿಷಯಗಳಿಗೆ ಮಾತ್ರ ಹೆಚ್ಚು ಒತ್ತನ್ನು ಕೊಟ್ಟರೆ ಜನಪ್ರಿಯತೆ ಹೆಚ್ಚುವುದರಲ್ಲಿ ಸಂದೇಹವೇ ಇಲ್ಲ.




–ಎನ್. ಪ್ರಕಾಶ, ದೇವನಹಳ್ಳಿ

# ಎಲ್ಲಾ ಟಿ.ಆರ್.ಪಿ.ಗಾಗಿ!

ತೀರ್ಪುಗಾರರು ಸರ್ವಾಧಿಕಾರಿಗಳಾಗುವುದರಿಂದ ಗಾಯನ ಹಾಗೂ ನೃತ್ಯಕ್ಕೆ ಸಂಬಂಧಿಸಿದ ರಿಯಾಲಿಟಿ ಶೋಗಳಲ್ಲಿ ಇತ್ತೀಚೆಗೆ ತುಂಬಾ ಜಗಳಗಳಾಗುತ್ತಿವೆ. ಕೆಲವು ತೀರ್ಪುಗಾರರು ನೃತ್ಯ ಸಂಯೋಜಕರೊಂದಿಗೆ (ಕೊರಿಯೋಗ್ರಾಫರ್ಸ್) ಹಾಗೂ ಸ್ಪರ್ಧಿಗಳೊಂದಿಗೆ ತುಂಬ ಒರಟಾಗಿ ವರ್ತಿಸುತ್ತಾರೆ.

ನೃತ್ಯ ಸಂಯೋಜಕರನ್ನೋ, ಆ್ಯಂಕರ್‌ಗಳನ್ನೋ ತೀರ್ಪು ನೀಡುವವರು ಹೀಯಾಳಿಸುವದು, ಅವರು ತಿರುಗೇಟು ನೀಡುವದು– ಇದರಿಂದ ತೀರ್ಪುಗಾರರು ಕೋಪಗೊಂಡು ಹೊರಟುಹೋಗುವದು, ನಂತರ ಅವರನ್ನು ಸಮಾಧಾನಪಡಿಸಿ ಕರೆದುಕೊಂಡು ಬಂದು ಕೂಡಿಸುವದು– ಇವೆಲ್ಲ ಈ ರಿಯಾಲಿಟಿ ಶೋಗಳಲ್ಲಿ ಮಾಮೂಲು ಸಂಗತಿಗಳಾಗಿ ಬಿಟ್ಟಿವೆ! ಕೆಲವೊಮ್ಮೆ ಸ್ಪರ್ಧಿಗಳೇ ತೀರ್ಪುಗಾರರ ವಿರುದ್ಧ ತಿರುಗಿ ಬೀಳುವದು, ಸ್ಪರ್ಧಿಗಳ ಪೋಷಕರು ತಮ್ಮ ಮಗುವಿಗೆ ಅನ್ಯಾಯವಾಗಿದೆ ಎಂದು ಗದ್ದಲವೆಬ್ಬಿಸುವದು, ಆಗ ತೀರ್ಪುಗಾರರ ಹಾಗೂ ಮಗುವಿನ ಪೋಷಕರ ಮಧ್ಯೆ ಮಾತಿನ ಚಕಮಕಿ ಜರಗುವುದು, ಇಬ್ಬರಲ್ಲಿ ಯಾರಾದರೂ ಒಬ್ಬರು ಸಭಾತ್ಯಾಗ ಮಾಡುವುದು– ಇವೆಲ್ಲ ಸಾಮಾನ್ಯ ಸಂಗತಿಗಳು!

ಇದೆಲ್ಲವನ್ನು ಕಂಡಾಗ ಪ್ರೇಕ್ಷಕನಾದ ನನಗೆ ಒಂದು ಸಂದೇಹ ಮೂಡುತ್ತಿದೆ. ಈ ಜಗಳಗಳು ನಿಜವಾಗಿ ನಡೆಯುತ್ತವೆಯೇ ಅಥವಾ ಒಂದು ರೀತಿಯ ಕೆಟ್ಟ ರೋಚಕತೆ ಸೃಷ್ಟಿಸಿ ಟಿ.ಆರ್.ಪಿ. ಹೆಚ್ಚಿಸಿಕೊಳ್ಳುವ ಹುನ್ನಾರವೆ?

–ಮುರಲೀಧರ ಕುಲಕರ್ಣಿ, ಬೀದರ್

## ಮಹಿಳೆ ತಿರುಗಿಬಿದ್ದರೆ...?

ರಥಸಪ್ತಮಿಯಲ್ಲಿ ಸಂಧ್ಯಾ, ಶ್ರದ್ಧಾ, ಸವಿತಾ, ಸಾಕ್ಷಿ– ಎಲ್ಲರೂ ಯಾವುದಾದರೂ ಒಂದು ವಿಧದಲ್ಲಿ ಪುರುಷರ ದಬ್ಬಾಳಿಕೆಗೆ ಒಳಪಟ್ಟವರು. ಕ್ರೌರ್ಯತನ ಪರಮಾವಧಿ ತಲುಪಿದರೆ ಇವರಲ್ಲಿ ಯಾರೊಬ್ಬರಾದರೂ 'ಸ್ತ್ರೀ ಶಕ್ತಿ' ಆಗಿ ಅವತಾರ ಎತ್ತಿ ಕ್ರೌರ್ಯವನ್ನು ಮಟ್ಟ ಹಾಕುವರೇನೋ? ಎಂಬ ನಿರೀಕ್ಷೆಯನ್ನು ಈ ಧಾರಾವಾಹಿ ನನ್ನಲ್ಲಿ ಹುಟ್ಟಿಹಾಕಿದೆ. ಅಬಲೆಯರು ಎಂದು ಅನಾದಿ ಕಾಲದಿಂದ ಕರೆಯಿಸಿಕೊಂಡ ಸ್ತ್ರೀಯರಲ್ಲಿ ಅಂತಹ 'ಧೀ' ಶಕ್ತಿ ಇದ್ದೇ ಇರುತ್ತದೆ ಎಂಬ ನಂಬಿಕೆ ನನ್ನದು.

–ನಾಗಮಣಿ ರಾಘವೇಂದ್ರ, ಬೆಂಗಳೂರು

## ಅತಿಯಾದ ಸ್ವೇಚ್ಛಾಚಾರ!

ಈ ಟಿವಿಯ ಮುತ್ತಿನ ತೋರಣದಲ್ಲಿ ಪೂರ್ವಿ ಚಕ್ರನೊಡನೆ ಎಷ್ಟೆಲ್ಲ ಸುತ್ತಾಡುತ್ತಾಳೆ. ಅತ್ತೆ– ಮಾವ, ಗಂಡನನ್ನು ಕೇಳದೆ ಎಷ್ಟೋ ಹಣ ಕೊಡುತ್ತಾಳೆ. ಅತ್ತೆ –ಮಾವಂದಿರ ಬಗ್ಗೆ ಸ್ವಲ್ಪವೂ ಗೌರವವಿಲ್ಲ. ಆದರೂ ಪೂರ್ವಿಯನ್ನು ಆಕೆಯ ಗಂಡ ಸ್ವಲ್ಪವೂ ದಂಡಿಸುವದಿಲ್ಲ!

ಇದು ಅತಿಯಾದ ಸ್ವೇಚ್ಛಾಚಾರ ಅನಿಸುವದಿಲ್ಲವೆ? ಶ್ರೀಮಂತಿಕೆ ಇದ್ದರೇನಾಯಿತು? ಯಾರನ್ನೂ ಕೇಳದೆ ಯಾರಿಗೆ ಎಷ್ಟು ಬೇಕೋ ಅಷ್ಟು ಹಣ ಕೊಡಬಹುದೆ?

–ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

## ಥಟ್... ರಾತ್ರಿ 9ಗಂಟೆಗೆ ಇರಲಿ

ಥಟ್ ಅಂತ ಹೇಳಿ ಪ್ರಸಾರದ ಸಮಯವನ್ನು ಮೊದಲಿನಂತೆ ರಾತ್ರಿ 9ಗಂಟೆಗೆ ನಿಗದಿಪಡಿಸಿ. ಇದರಿಂದ ವಿದ್ಯಾರ್ಥಿಗಳಿಗೆ ಅಷ್ಟೇ ಅಲ್ಲ, ಎಲ್ಲರಿಗೂ ಉಪಯೋಗವಾಗುತ್ತದೆ.

–ಬಿ.ಆಶಾ, ದಾವಣಗೆರೆ

ಪ್ರತಿಕ್ರಿಯೆ

## ಸ್ವಯಂವರವಲ್ಲ... ಸ್ವಪ್ರಶಂಸೆ!

ಸ್ವಯಂವರ ಧಾರಾವಾಹಿ ಪ್ರಾರಂಭವಾಗಿ 7–8 ವಾರವಾಯಿತು. ಒಬ್ಬರ ಸ್ವಯಂವರವೂ ಆಗಿಲ್ಲ! ಹಾಗಾದರೆ ಈ ಧಾರಾವಾಹಿ ಬರೀ ಹುಡುಗಾಟಿಕೆಗಾಗಿ ನಡೆಯುತ್ತಿದೆಯೇ? ಭಾಗವಹಿಸುವ ಹುಡುಗರು ಹಾಗೂ ಹುಡುಗಿ ಸುಮ್ಮನೆ ಟಿ.ವಿ.ಯಲ್ಲಿ ಕಾಣಿಸಿಕೊಂಡು ತಮ್ಮ ಸ್ವಪ್ರಶಂಸೆಯನ್ನು ಮಾಡಿಕೊಳ್ಳುತ್ತಿದ್ದಾರೆ! ಇದಕ್ಕೆ ಅವರ ತಂದೆ–ತಾಯಿಗಳು ಪ್ರೋತ್ಸಾಹ ಕೊಡುತ್ತಿದ್ದಾರೆ!

–ಸುಚಿತ್ರಾ ನರಸಾಪೂರ, ಶಿವಮೊಗ್ಗ

## ಅತುಲ್, ಸುದೀಪ್ ನಿರೂಪಣೆ ನೀರಸ

'ಪ್ಯಾಟೆ ಹುಡ್ಗೀರ ಹಳ್ಳಿ ಲೈಫ್' ಹೆಚ್ಚು ನಿರೀಕ್ಷೆ ಹುಟ್ಟಿಸಿತ್ತು. ಆದರೆ ರಂಜನೀಯವಾಗಿ ಮತ್ತು ಕ್ರಮವರಿತು ಬಿಂಬಿಸುವಲ್ಲಿ ನಿರೂಪಕರು ವಿಫಲರಾಗಿದ್ದಾರೆ. ಭಾಗವಹಿಸುವ ಸ್ಪರ್ಧಿಗಳಲ್ಲಿ ಉತ್ಸಾಹವಿದೆ. ಅದನ್ನು ಬಳಸಿಕೊಳ್ಳುವಲ್ಲಿ ವಿಫಲವಾಗಿದ್ದಾರೆ. ಯೋಜನೆಯಲ್ಲಿ ಪ್ರಬುದ್ಧತೆಯಿಲ್ಲದೆ ಹೀಗೇ ಆಗುತ್ತದೆ.

–ಹೊನ್ನಪ್ಪ ಕ್ಯಾತಸಂದ್ರ, ತುಮಕೂರು

## ಏನಕೇನ ಪ್ರಚಾರ

ನಿತ್ಯಾನಂದ, ಹಾಲಪ್ಪನವರ ಪ್ರಕರಣಗಳು ಶೃಂಗಾರವಲ್ಲ, ಅಪರಾಧ ದೃಶ್ಯಗಳು. ಅವನ್ನೇ ಚಾನೆಲ್‌ನವರು ಜನರಿಗೆ ತಿಳಿಸಿದ್ದಾರೆ ಎಂದು ಕೆ.ಎಸ್. ಅಂಜನಾ ಎಂಬುವರು ಸಮರ್ಥಿಸಿದ್ದಾರೆ.

'ಮಡಕೆಯನ್ನು ಒಡೆದೋ, ತಡಿಕೆ ಹರಿದೋ, ಕತ್ತೆಯನ್ನೇರಿಯೋ ಹೇಗಾದರೂ ಸರಿ– ಪ್ರಸಿದ್ಧನಾಗು' ಎನ್ನುವ ಸಂಸ್ಕೃತ ಶ್ಲೋಕದಂತೆ ಖಾಸಗಿ ವಾಹಿನಿಗಳಿಂದ ಅಪರಾಧಿಗಳಿಗೆ ಶಿಕ್ಷೆಗಿಂತ ಹೆಚ್ಚಾಗಿ ಪ್ರಚಾರ ಸಿಗುತ್ತದೆ.

–ವೀಣಾಶಂಕರ್, ದಾವಣಗೆರೆ

(ಮುಂದಿನ ಪುಟ ನೋಡಿ)